(ಆ) ಧಾರವಾಡ ನಗರ ಸತ್ತೂರ ಪ್ರದೇಶದಲ್ಲಿ ಪೊಲೀಸ್ ಠಾಣೆ ತೆರೆಯುವ ಕುರಿತು ಸೂಕ್ತ ಸಮರ್ಥನೆ ಕಂಡು ಬಾರದ ಕಾರಣ ಕೈಬಿಡಲಾಗಿದೆ. ಧಾರವಾಡ ವಿಶ್ವವಿದ್ಯಾಲಯ ಪ್ರದೇಶದಲ್ಲಿ ಹೊಸ ಪೊಲೀಸ್ ಠಾಣೆ ತೆರೆಯುವ ಹಾಗೂ ಧಾರವಾಡ ಶಹರದಲ್ಲಿ ದಕ್ಷಿಣ ಸಂಚಾರಿ ಪೊಲೀಸ್ ಠಾಣೆ ತೆರೆಯುವ ಕುರಿತಂತೆ ಪ್ರತಿವರ್ಷ ಆಯವ್ಯಯದಲ್ಲಿ ಒದಗಿಸಲಾಗುವ ಅನುದಾನಕ್ಕನುಗುಣಗಾಗಿ ಹಾಗೂ ಆದ್ಯತೆ ಮೇರೆಗೆ ಸದರಿ ಪ್ರದೇಶಗಳಲ್ಲಿ ಪೊಲೀಸ್ ಠಾಣೆಗಳನ್ನು ತೆರೆಯುವ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು.

ಮಹಾನಗರಗಳ "ಸಮಗ್ರ ಅಭಿವೃದ್ಧಿ ಯೋಜನೆ"

1100 (1636); ಶ್ರೀ ಅರವಿಂದ ಚಂದ್ರಕಾಂತ ಬೆಲ್ಲದ (ಹುಬ್ಬಳ್ಳಿ–ಧಾರವಾಡ ಪಶ್ಚಿಮ)

ಅ) ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯು ರಾಜ್ಯದ ಅತೀ ದೊಡ್ಡ ಮಹಾನಗರ ಪಾಲಿಕೆಯಾಗಿದ್ದು, ಈ ಮಹಾನಗರಗಳ "ಸಮಗ್ರ ಅಭಿವೃದ್ಧಿ ಯೋಜನೆ"ಯು ಯಾವ ಹಂತದಲ್ಲಿದೆ (ಮಾಹಿತಿ ಒದಗಿಸುವುದು);

ಆ) ಈ ಯೋಜನೆಯನ್ನು ಯಾವಾಗ ಮುಕ್ತಾಯಗೊಳಿಸಲಾಗುವುದು ಇದಕ್ಕೆ ಕಾಲಮಿತಿ ನಿಗಧಿಪಡಿಸಲಾಗಿದೆಯೇ (ಸಮಗ್ರವಾದ ಮಾಹಿತಿ ನೀಡುವುದು)?

ಶ್ರೀ ವಿನಯಕುಮಾರ್ ಸೊರಕೆ (ಮಾನ್ಯ ನಗರಾಭಿವೃದ್ಧಿ ಸಚಿವರು)

ಅ) ಹುಬ್ಬಳ್ಳಿ–ಧಾರವಾಡ ನಗರದ ಮಹಾಯೋಜನೆ ಪರಿಷ್ಕೃತ–2 ಪರಿಷ್ಕರಣೆ ಕಾರ್ಯವು ಪ್ರಗತಿಯಲ್ಲಿದ್ದು, ಪ್ರಸ್ತುತ ಭೂ ಉಪಯೋಗದ ನಕ್ಷೆಗಳನ್ನು ತಯಾರಿಸುವ ಹಂತದಲ್ಲಿರುತ್ತದೆ.

ಆ) ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 13(ಡಿ) ರನ್ವಯ ನಗರಾಭಿವೃದ್ಧಿ ಪ್ರಾಧಿಕಾರಗಳು ಪ್ರತಿ ಹತ್ತು

ವರ್ಷಗಳಿಗೊಮ್ಮೆ ಮಹಾಯೋಜನೆಯನ್ನು ಪರಿಷ್ಕರಿಸಲು ನಿರ್ದೇಶನವಿರುತ್ತದೆ. ಆದರೆ ಮಹಾಯೋಜನೆಯನ್ನು ಪರಿಷ್ಕರಿಸಿ ಸಲ್ಲಿಸಲು ಯಾವುದೇ ಕಾಲಮಿತಿ ನಿಗಧಿಪಡಿಸಿರುವುದಿಲ್ಲ.

ವರ್ತೂರು ಕೆರೆಯ ನೀರು ಪೋಲಾಗುತ್ತಿರುವುದು

1101 (1824); ಶ್ರೀ ಅರವಿಂದ ಲಿಂಬಾವಳಿ (ಮಹದೇವಪುರ)

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಪರಿಮಿತಿಯಲ್ಲಿ ಬರುವ ವರ್ತೂರು ಕೆರೆಯಿಂದ ನೀರು ಹರಿದು ಹೋಗುತ್ತಿರುವುದನ್ನು ಸರ್ಕಾರ ಗಮನಿಸಿದೆಯೇ;

ಆ) ಹಾಗಿದ್ದಲ್ಲಿ, ಅನಾವಶ್ಯಕವಾಗಿ ವ್ಯರ್ಥವಾಗುತ್ತಿರುವ ನೀರನ್ನು ತಡೆಗಟ್ಟಲು ಸರ್ಕಾರ ಯಾವುದಾದರೂ ಯೋಜನೆ ರೂಪಿಸಿದೆಯೇ?

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯ ಮಂತ್ರಿಯವರು)

ಅ) ಹೌದು.

ಆ) ವರ್ತೂರು ಕೆರೆಯಿಂದ ಹರಿದು ಹೋಗುತ್ತಿರುವ ನೀರು ರಾಸಾಯನಿಕ ಮತ್ತು ವಿಷಯುಕ್ತವಾಗಿದ್ದು, ಈ ಕಲುಷಿತ ನೀರು ಬಳಕೆಗೆ ಸೂಕ್ತವಾಗಿರುವುದಿಲ್ಲ. ವರ್ತೂರು ಕೆರೆಗೆ ಹರಿದು ಬರುತ್ತಿರುವ ಕಲುಷಿತ ನೀರಿಗೆ ತ್ಯಾಜ್ಯ ನೀರು ಸಂಸ್ಕರಣಾ ಘಟಕವನ್ನು ಅಳವಡಿಸಿ ಶುದ್ಧೀಕರಿಸಿದ ನಂತರ ಬಳಕೆಗೆ ಲಭ್ಯವಾಗುತ್ತದೆ. ಇದಲ್ಲದೆ ಕೆರೆಯ ಮೇಲ್ಭಾಗದಲ್ಲಿರುವ ಎಲ್ಲಾ ಬಡಾವಣೆಗಳಿಗೆ ಒಳಚರಂಡಿ ವ್ಯವಸ್ಥೆಯನ್ನು ಪೂರ್ಣಗೊಳಿಸಿ ಆ ನೀರನ್ನು ಸಹ ಕೆರೆಗೆ ಹರಿಯದಂತೆ ತಡೆಗಟ್ಟಿ ತ್ಯಾಜ್ಯ ನೀರು ಸಂಸ್ಕರಣಾ ಘಟಕದಿಂದ ಶುದ್ಧೀಕರಿಸಬೇಕಾಗುತ್ತದೆ. ಅನಾವಶ್ಯಕವಾಗಿ ವ್ಯರ್ಥವಾಗುತ್ತಿರುವ ನೀರನ್ನು ತಡೆಗಟ್ಟುವ ಬಗ್ಗೆ ಯಾವುದೇ ಯೋಜನೆ ರೂಪಿಸಿರುವುದಿಲ್ಲ.